JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕಾರಂತ ಹಾಗೂ ತಕಳಿರವರ ಕಾದಂಬರಿಗಳಲ್ಲಿ ಮಾಧ್ಯಮಗಳ ಪಾತ್ರ

ಡಾ. ಪಿ. ನಂಜುಂಡ ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಕಲಾ ಕಾಲೇಜು ಬೆಂಗಳೂರು–560001
ಇ–ಮೇಲ್ 1981ಟಿಚಿಟಿರಿಣಠಿ@ರಟಚಿಟ.ಛಿಠಟ

ಡಾ. ಕೆ. ಶಿವರಾಮ ಕಾರಂತ ಮತ್ತು ತಕಳಿ ಶಿವಶಂಕರಪಿಳ್ಳೆರವರ ಪ್ರಾತಿನಿಧಿಕ ಕಾದಂಬರಿಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಮಾಧ್ಯಮಗಳ ಪಾತ್ರವನ್ನು ಪರಿಶೀಲಿಸಿದಾಗ ಮಾಧ್ಯಮಗಳ ಸಾಮಾಜಿಕ ಹೊಣೆಗಾರಿಕೆಯ ಹಿರಿಮೆಯನ್ನು ಕಾಣಬಹುದು.

20ನೇ ಶತಮಾನದ ಕನ್ನಡ ಮತ್ತು ಮಲಯಾಳಂ ಭಾಷೆಯ ಶಕ್ತ ಗದ್ಯ ಲೇಖಕರುಗಳಾದ ವಾಸ್ತವವಾದಿ ಗಟ್ಟಿನೆಲೆಯಲ್ಲಿ ನಿಂತ ದೇಸಿ ಪರಂಪರೆಯ ಸಾಹಿತಿಗಳಾದ ಕಾರಂತ ಮತ್ತು ತಕಳಿರವರ ಸಾಹಿತ್ಯವು ಕನ್ನಡ ಮತ್ತು ಮಲೆಯಾಳಂ ಭಾಷೆಯಲ್ಲಿ ಹಾಸುಹೊಕ್ಕಾಗಿರುವುದನ್ನು ಗಮನಿಸಬಹುದು. ಕಾರಂತ ಮತ್ತು ತಕಳಿರವರು ಕಥನ ಸಾಹಿತ್ಯದಲ್ಲಿ ಭಾರತೀಯ ಲೇಖಕರಿಗಿಂತ ದೊಡ್ಡ ಹೆಸರು.

ನವೋದಯ, ಮಾರ್ಕ್ಸ್‌ವಾದಿ ನೋಟಕ್ರಮಗಳಿಂದ ಕಾರಂತ ಮತ್ತು ತಕಳಿರವರ ಕಾದಂಬರಿಯನ್ನು ವಿಶ್ಲೇಷಿಸಲು ಹೊರಡುವಾಗ ಪಂಥವನ್ನು ಮೀರಿದ ಬರವಣಿಗೆಯನ್ನು ನಾವು ಕಾಣಬಹುದಾಗಿದೆ,

ನೆಪೊಲೀಯನ್ ಬೋನಾರ್ಪಾರ್ಟ ಒಂದೆಡೆ ಹೇಳಿರುವಂತೆ, "ನಾನು ಲಕ್ಷಾಂತರ ಸೈನಿಕರನ್ನು ಸಮರ್ಥವಾಗಿ ಎದುರಿಸುತ್ತೇನೆ. ಆದರೆ ಮಾಧ್ಯಮಗಳನ್ನು ನನ್ನಿಂದ ಎದುರಿಸುವುದು ಅಸಾಧ್ಯ"ವೆನ್ನುವ ಮಾತುಗಳನ್ನು ಹೇಳುತ್ತಾನೆ. ಯಾವ ವ್ಯಕ್ತಿ ಇತಿಹಾಸದ ಪುಟಗಳಲ್ಲಿ ಹೇಳಿದ ಮಾತುಗಳು ಅಂದು–ಇಂದು–ಮುಂದು ಪುನರುಕ್ತಿ ಪಡೆಯುತ್ತದೆಯೋ "ಅಸಾಧ್ಯವೆನ್ನುವುದು ನನ್ನ ಶಬ್ಧಕೋಶದಲ್ಲಿಲ್ಲ" ಎನ್ನುವ ಮಾತು ಹೇಳಿದ ವ್ಯಕ್ತಿಯೇ ಮಾಧ್ಯಮಗಳ ಬಗ್ಗೆ ಹೇಳಿರುವ ಮಾತುಗಳನ್ನು ಗಮನಿಸುವುದು ಅತಿಮುಖ್ಯವಾಗಿದೆ. ಮಾಧ್ಯಮಗಳು ಇಂದು ಜಾಗತೀಕರಣದ ಪ್ರಭಾವಕ್ಕೆ ಸಿಕ್ಕಿ ನಾಗಾಲೋಟದಿಂದ ಹುಚ್ಚುಕುದುರೆಯಂತೆ ಓಡುತ್ತಿದೆ. ಅದಕ್ಕೆ ಲಗಾಮು ಹಾಕುವುದಕ್ಕೆ ಕಾನೂನಿನ ಅಡಿಯಲ್ಲಿ ಸಾಧ್ಯವಾದರೂ ಅದನ್ನು ಸಮರ್ಪಕವಾಗಿ ಜಾರಿಗೆ ಬರಲು ತಡೆಯೊಡ್ಡಿರುವುದು ಮಾಧ್ಯಮಗಳು ಜನಸಾಮಾನ್ಯರನ್ನು ಸಮೂಹ ಸನ್ನಿಯಂತೆ ಸೆಳೆಯುವ ಚುಂಬಕ ಶಕ್ತಿಯಿದೆ. ಇದು ಮಾಧ್ಯಮಗಳ ಶಕ್ತಿಯು ಹೌದು, ದೌರ್ಬಲ್ಯವೂ ಹೌದು, ಹಿಂದೆ ಪತ್ರಿಕೋದ್ಯಮವನ್ನು 'ಅವಸರ ಸಾಹಿತ್ಯ'ವೆಂದು ಕರೆಯುತ್ತಿದ್ದರು. ಅಂದರೆ ಹಿಂದಿನಿಂದಲೂ ಮಾಧ್ಯಮಗಳಿಗೂ ಕನ್ನಡ ಕಾದಂಬರಿಗಳಿಗೂ, ಬೇರೆ ಯಾವ ಭಾಷೆಯ ಕಾದಂಬರಿಗಳಿಗೂ ಅವಿನಾನುಭಾವ ಸಂಬಂಧವಿದೆಯೆಂದು ತಿಳಿದಕೊಳ್ಳಬಹುದು.

ಕನ್ನಡ ಕಾದಂಬರಿಗಳು ಮೊದಲಿನಿಂದ ಇಲ್ಲಿಯವರೆಗೂ ಕೂಡ ಮಾಧ್ಯಮ ಅದರಲ್ಲೂ ಚಲನಚಿತ್ರ ಮಾಧ್ಯಮದ ಮೂಲಕ ಅಂತರ್‌ಸಂಬಂಧವನ್ನು ಹೊಂದಿರುವುದನ್ನು ಕಾಣಬಹುದು. 1933ರಲ್ಲಿ 104 ಪುಟಗಳಿಂದ ರಚನೆಗೊಂಡ ಭಾರತದ ಸ್ವಾತಂತ್ರ್ಯಪೂರ್ವದಲ್ಲಿ ಬಂದ ಡಾ. ಕೆ. ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿಯು ಕನ್ನಡ ಕಾದಂಬರಿ ಇತಿಹಾಸದಲ್ಲಿ ಮಾಡಲಾಗದ ಅನೇಕ ವಿಮರ್ಶೆಗಳನ್ನು, ಚರ್ಚೆಗಳನ್ನು ಹುಟ್ಟು ಹಾಕಿದೆ. ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ, ಸ್ತ್ರೀವಾದ ಅಧ್ಯಯನ ಮತ್ತು ಸಾಂಸ್ಕೃತಿಕ ಅಧ್ಯಯನವೆನ್ನುವ ವಿಮರ್ಶಾಪಂಥದ ಎಲ್ಲೆಗಳನ್ನು ಈ ಕಿರುಕಾದಂಬರಿ ಮೀರಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಸಾಹಿತ್ಯದ ಸಿದ್ಧ ಮಾದರಿಯಂತೆ ಬ್ರಾಹ್ಮಣ ಲೇಖಕ ಅಗ್ರಹಾರದ ಬಗ್ಗೆ ಬರೆದರೆ, ದಲಿತ ಲೇಖಕ ತನ್ನ ಕೇರಿಯ ಬಗ್ಗೆ, ಮಹಿಳಾ ಲೇಖಕಿ ಸ್ತ್ರೀಪರ ಕೇಂದ್ರಿತವಾಗಿ ಬರೆದರೆ ಮಾತ್ರ ಅದು ಅಧಿಕೃತವಾಗುತ್ತದೆಯೆನ್ನುವ ಸಂಕಥನವನ್ನು ಕಾರಂತರು ಬಹು ಹಿಂದೆಯೇ ಮುರಿದಿದ್ದಾರೆ.

ನಡೆ–ನುಡಿ ಒಂದೇಯೆನ್ನುವಂತೆ ಬಾಳಿಬದುಕಿದವರು ಕಾರಂತರು. ವೇದಿಕೆಯ ಮೇಲೆ ಮಾತ್ರ ತಮ್ಮ ವೈಚಾರಿಕ ಭಾಷಣಗಳಿಗೆ ಸೀಮಿತವಾಗದೇ ನಿಜಜೀವನದಲ್ಲಿಯೂ ಅಂತರ್‌ಜಾತಿ ವಿವಾಹವಾಗಿ ಸಮಾಜಕ್ಕೆ ಮಾದರಿಯಾದರು.

ಮಹಾತ್ಮಗಾಂಧೀಜಿರವರಿಗೂ ಶಿವರಾಮಕಾರಂತರಿಗೂ ಭಿನ್ನಾಭಿಪ್ರಾಯಗಳಿವೆ. ಕಾರಂತರು ಮಹಿಳೆಯರ ವೈಯಕ್ತಿಕ ಮತ್ತು ಸಮುದಾಯಿಕ ಸಮಸ್ಯೆಗಳನ್ನು ವಾಸ್ತವತಾವಾದೀ ನೆಲೆಗಟ್ಟಿನಿಂದ ನೋಡಿದರೆ, ಮಹಾತ್ಮಗಾಂಧೀಜಿರವರು ಅವಳ ಸಮಸ್ಯೆಯನ್ನು ಅಧ್ಯಾತ್ಮದ ಹಿನ್ನೆಲೆಯಿಂದ ನೋಡುತ್ತಾರೆ. ಇವರಿಬ್ಬರ ತಾತ್ವಿಕ ಭಿನ್ನಾಭಿಪ್ರಾಯಗಳಿಗೆ ಪತ್ರ ಮಾಧ್ಯಮಗಳು ಸಾಕ್ಷಿಯಾಗಿವೆ. ಕಾರಂತರು ಪತ್ರಗಳ ಮೂಲಕ ಗಾಂಧೀಜಿರವರ ಬಳಿ ಹಲವು ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಪಡೆಯುತ್ತಿದ್ದರು. ಅದು ಸ್ವತಂತ್ರ್ಯ ಚಳುವಳಿಯ ಬಗ್ಗೆ, ವಿದ್ಯಾರ್ಥಿ ಜೀವನದ ಹೋರಾಟದ ಬಗ್ಗೆ, ಸಮಾಜದಲ್ಲಿರುವ ಸಾಮಾಜಿಕ ಸಮಸ್ಯೆಗಳ ಬಗ್ಗೆ ಇದು ಮಾಧ್ಯಮಗಳ ಬಹುಮುಖ್ಯ ಸಾಮಾಜಿಕ ಹೊಣೆಗಾರಿಕೆಯೆಂದೆನಿಸುತ್ತದೆ.

ಕಾರಂತರ ಅನೇಕ ಕಾದಂಬರಿ ಬರಹಗಳ ಹಿಂದೆ ಮಹಾತ್ಮಗಾಂಧೀಜಿರವರ ಪಾತ್ರವಿರುವುದನ್ನು ಗುರುತಿಸಬಹುದು. ಗಾಂಧೀಜಿರವರು ಕಾರಂತರಿಗೆ ಬರೆದ ಪತ್ರಗಳಿಂದ ಕಾರಂತರು ಸಮಾಜವನ್ನು, ಸಮಾಜದಲ್ಲಿರುವ ಮಹಿಳೆಯರನ್ನು ನೋಡುವ ದೃಷ್ಟಿಕೋನ ಸಂಪೂರ್ಣವಾಗಿ ಬದಲಾಯಿತು. ಅದನ್ನು ಕಾರಂತರು ಸರಸಮ್ಮಾನ ಸಮಾಧಿ, ಮೈ–ಮನಗಳ ಸುಳಿಯಲ್ಲಿ ಅವರ ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿಯಾದ ಮೂಕಜ್ಜಿಯ ಕನಸುಗಳು, ಮರಳಿ ಮಣ್ಣಿಗೆ ಕಾದಂಬರಿಗಳಲ್ಲಿ ಗುರುತಿಸಬಹುದು. ಅದು ಸಾಧ್ಯವಾದದ್ದು ಕಾರಂತ ಮತ್ತು ಗಾಂಧೀಜಿರವರ ಪತ್ರಸಾಹಿತ್ಯ ಮಾಧ್ಯಮದಿಂದ.

ಈ ಪತ್ರ ಸಾಹಿತ್ಯ ಮಾಧ್ಯಮದಿಂದ ಹೊರಹೊಮ್ಮಿದ ಕಾರಂತರ ಚಿಂತನೆಗಳು ಅರಳುಗಟ್ಟಿದ್ದು ಸಮೂಹಮಾಧ್ಯಮಗಳಲ್ಲಿ ಒಂದಾದ 'ಸಿನಿಮಾ ಕ್ಷೇತ್ರದಲ್ಲಿ'.

ಕಾರಂತರ ಅನೇಕ ಕಾದಂಬರಿಗಳು ಕನ್ನಡ ಸಿನಿಮಾಕ್ಷೇತ್ರದಲ್ಲಿ ಅಪಾರವಾದ ಜನಮನ್ನಣೆಯನ್ನು ಪಡೆದಿದೆ. ಅವರ ಕಾದಂಬರಿಗಳಾದ ಚೋಮನದುಡಿ, ಸರಸಮ್ಮಾನ ಸಮಾಧಿ, ಬೆಟ್ಟದ ಜೀವ ಮತ್ತು ಚಿಗುರಿದ ಕನಸುಗಳು ಸಿನಿಮಾವಾಗಿದೆ. ಚಿಗುರಿದ ಕನಸು ಹಿಂದಿಯ ಶಾರೂಕ್ ಖಾನ್ ಅಭಿನಯದ 'ಸ್ವದೇಶ್' ಸಿನಿಮಾಗೆ ಪ್ರೇರಣೆ ಮತ್ತು ಪ್ರಭಾವಗಳನ್ನು ಒದಗಿಸಿರುವುದನ್ನು ಕಾಣಬಹುದು.

ಒಂದು ಭಾಷೆಯ ಮಾಧ್ಯಮದ ಕೃತಿ ಬೇರೊಂದು ಭಾಷೆಯ ಮಾಧ್ಯಮಕೃತಿಯೊಂದಿಗೆ ಹೇಗೆ ಸಾಮ್ಯತೆಯನ್ನು ಸಾಧಿಸುತ್ತದೆ ಎಂದು ತಿಳಿಯಬಹುದಾಗಿದೆ. ಅದರಿಂದ ಮಾಧ್ಯಮಗಳು ಯಾವಾಗಲೂ ಪ್ರಭಾವಶಾಲಿಯಾದ ಸಂವಹನ ಮಾಧ್ಯಮವಾಗಿರುತ್ತದೆ. ನೋಡುಗರ ಕಣ್ಣು ಮತ್ತು ಕಿವಿಯ ಮೂಲಕ ಅವರ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಹೊಂದುವ ಚಿತ್ರಕಶಕ್ತಿಯನ್ನು ಹೊಂದಿರುತ್ತದೆ.

ಚೋಮನದುಡಿ ಕಾದಂಬರಿಯು ರಚನೆಯಾದಾಗ ಅದು ಅಕ್ಷರಸ್ಥರ ಸೊತ್ತಾಗಿತ್ತು. ಓದು–ಬರಹ ಬಲ್ಲವರಿಗೆ ವಿದ್ಯಾವಂತರ ಪಠ್ಯವಾಗಿದ್ದ ಚೋಮನದುಡಿ ಕಾದಂಬರಿ ಸಿನಿಮಾವಾದಾಗ ಚೋಮನಾಗಿ ಅಭಿನಯಿಸಿದ ಶ್ರೀ ವಾಸುದೇವರವರಿಗೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿತು. ದುಡಿಯೆನ್ನುವುದು ಹೇಗೆ ಮಾಧ್ಯಮವಾಗಿ ಚೋಮ ತನ್ನ ಸುಖ, ದುಃಖ, ದುಮ್ಮಾನಗಳಿಗೆ ತನ್ನ ನೋವು–ನಲಿವುಗಳಿಗೆ ಹೇಗೆ ಸಮರ್ಥವಾಗಿ ಬಳಸಿಕೊಂಡಯೆನ್ನುವುದು ಚಲನಚಿತ್ರ ಮಾಧ್ಯಮ 'ಚೋಮನ ದುಡಿ'ಯ ಮಾಧ್ಯಮವನ್ನು ಸಮಗ್ರವಾಗಿ ಸೆರೆಹಿಡಿಯುವ ಪ್ರಯತ್ನ ಮಾಡಿತ್ತು. ಅನಕ್ಷರಸ್ಥರು, ಹಳ್ಳಿಯ ಗ್ರಾಮೀಣ ಅಸಂಖ್ಯಾತ ಗ್ರಾಮೀಣ ಚೋಮರಿಗೆ ಚೋಮನ ಈ ದುಃಸ್ಥಿತಿಗೆ ಕಾರಣವಾದ ಅಂಶಗಳನ್ನು ಚೋಮನದುಡಿ ಸಿನಿಮಾ ಪರಿಣಾಮಕಾರಿಯಾಗಿ ಮನೆ ಮತ್ತು ಮನ ಮುಟ್ಟಿಸುವಲ್ಲಿ ಯಶಸ್ವಿಯಾಯಿತು.

ಚೋಮನ ದುರಂತಕ್ಕೆ ಅವನ ಜಾತಿ ಕಾರಣವೋ? ಅವನ ಆಸೆ ಕಾರಣವೋ? ಅವನ ಕುಡಿತ–ಅನಕ್ಷರತೆ ಕಾರಣವೊ? ಅವನ ಧರ್ಮ ಕಾರಣವೋ? ಅವನ ಗಂಡು–ಹೆಣ್ಣುಮಕ್ಕಳು ಕಾರಣವೋ? ತಲೆಮಾರಿನ ಅಂತರವು ಕಾರಣವೋ? ಎನ್ನುವ ಸಂಕೀರ್ಣ ಸಮಸ್ಯೆಗಳಿಗೆ ಉತ್ತರವನ್ನು ಸಮರ್ಥವಾಗಿ ಚಲನಚಿತ್ರ ಮಾಧ್ಯಮವಾಗಿ 'ಚೋಮನ ದುಡಿ' ಕಾದಂಬರಿಯು ಮಾಡುತ್ತದೆ. ಇದರ ಮೂಲಕ ಪ್ರಜಾಪ್ರಭುತ್ವ ನಾಲ್ಕನೇ (04) ಅತಿ ದೊಡ್ಡ ಸ್ತಂಭವಾಗಿ ಮಾಧ್ಯಮಗಳು ಸಾಮಾಜಿಕ ಹೊಣೆಗಾರಿಕೆಯನ್ನು ಮರೆದಿದೆ.

ಹಾಗೆಯೇ ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿ ಚಲನಚಿತ್ರವಾದಾಗ ಸಮಾಜದಲ್ಲಿ ವಿವಾಹೇತರ ಸಂಬಂಧಗಳನ್ನು ಹೇಗೆ ಕಾಣಲಾಗುತ್ತದೆಯೆನ್ನುವ ದಾರ್ಶನಿಕ ದೃಷ್ಟಿಕೋನವನ್ನು ಗುರುತಿಸಲಾಗಿದೆ. ಮದುವೆಯಾಗಿ ಮಕ್ಕಳಾಗದೇ ಇರುವವರನ್ನು ಗೊಡ್ಡು

ಸಂಪ್ರದಾಯಗಳ ಮೂಲಕವಾಗಿ ಹೆಣ್ಣನ್ನು ಹೇಗೆ ಬಲಿಪಶುವನ್ನಾಗಿ ಮಾಡುತ್ತಾರೆಯೆನ್ನುವುದನ್ನು ಕಾದಂಬರಿಯ ಶೀರ್ಷಿಕೆಯು ವ್ಯಂಗ್ಯವಾಗಿ ಪ್ರತಿನಿಧಿಸುವುದನ್ನು ಗಮನಿಸಬಹುದು. 'ಸರಸಮ್ಮಾನ ಸಮಾಧಿ' ಸಿನಿಮಾದ ಮೇಲೆ ಧರ್ಮದ ಮೂಲಕ, ಲಿಂಗದ ಮೂಲಕ, ವರ್ಗದ ಮೂಲಕ ಹೆಣ್ಣು ಹೇಗೆ ಬಗೆ–ಬಗೆಯಾಗಿ ಶೋಷಣೆಗೆ ಒಳಗಾಗುತ್ತಾಳೆ ಎನ್ನುವ ಅಂಶವನ್ನು ಸಮರ್ಥವಾಗಿ ತೆರೆಯ ಮೇಲೆ ತೆರೆದಿಡುವ ಪ್ರಯತ್ನವು ಸಾಗಿದೆ.

ಹಾಗೆಯೇ ಕಾರಂತರ 'ಬೆಟ್ಟದ ಜೀವ' ಕಾದಂಬರಿಯು ಸಿನಿಮಾವಾದಾಗ ಕಾದಂಬರಿಯಂತೆ ಸಿನಿಮಾದಲ್ಲಿಯೂ ಕರಾವಳಿ ಪ್ರದೇಶದ ಹಸಿರು ಕಾನಾನತೆಗಳು ಮುಂದುವರೆದಿರುವುದನ್ನು ಪರಿಶೀಲಿಸಬಹುದು. ನಿಸರ್ಗವೂ ಸೌಂದರ್ಯವನ್ನು ನೀಡಬಹುದು. ಅಪಾಯವನ್ನು ತರಬಹುದೆಂದು ಹೇಳುತ್ತಲೇ ಮನೆಯ ಯಜಮಾನ ಗೋಪಾಲಯ್ಯ ಯಜಮಾನಿ ಶಂಕರೀ ಪಾತ್ರ ಚಿತ್ರಣಗಳ ಮೂಲಕ ವೃದ್ಧಾಪ್ಯ ದಾಂಪತ್ಯವೆನ್ನುವುದು ಬದುಕಿನ ಅತಿ ಮೌಲ್ಯಗಳಲ್ಲಿ ಒಂದು ಎಂದು ತಿಳಿಸುತ್ತಾ, ದಾಂಪತ್ಯವು ಮಾನವನ ರಹದಾರಿಗೇ ಮಾರ್ಗಸೂಚಕವಾಗಿ ಕೆಲಸ ಮಾಡುತ್ತದೆಯೆಂದು ತಿಳಿಸುತ್ತಾ, ಕಾರಂತರ ಜೀವನಮೌಲ್ಯ 'ಋಣ'ದ ಪರಿಕಲ್ಪನೆ. ನಾವು ಸಮಾಜದಲ್ಲಿ ಇಷ್ಟೊಂದು ಚೆನ್ನಾಗಿ ಜೀವಿಸಲು ಕಾರಣವಾಗಿರುವುದು ಸಮಾಜ. ಅದಕ್ಕಾಗಿ ಮಾನವನು ಇರುವಷ್ಟು ವರ್ಷಗಳು ತನ್ನ ಸಮಾಜಕ್ಕೆ ಬಾಡಿಗೆ ರೂಪದಲ್ಲಿ ಋಣವನ್ನು ತೀರಿಸುವುದು ಅತಿಮುಖ್ಯವೆಂದು ವಾದಿಸುತ್ತಾರೆ. ಈ ಸಿನಿಮಾ ಯುವಜನಾಂಗಕ್ಕೆ ಒಂದು ಮಾದರಿ ಸಿನಿಮಾವಾಗಿ ರೂಪುಗೊಂಡಿದೆ.

ಇಂದು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಮದುವೆಗಳು, ಸಂಬಂಧಗಳು ಶಿಥಿಲಾವ್ಯವಸ್ಥೆಯ ಕಡೆಗೆ ಜಾರುವ ದಾರಿಯಲ್ಲಿರುವ ಈ ಹೊತ್ತಿನಲ್ಲಿ 'ಬೆಟ್ಟದ ಜೀವ' ವಿವಾಹದ ಮೌಲ್ಯಗಳು, ಸಂಬಂಧಗಳ ಮೌಲ್ಯಗಳ ಬಗ್ಗೆ, ಋಣಗಳ ಮೌಲ್ಯಗಳ ಬಗ್ಗೆ ನಮ್ಮನ್ನು ಆತ್ಮಾವಲೋಕನವನ್ನು ಮಾಡಿಕೊಳ್ಳುವಂತೆ ಮಾಡುವುದು ಪ್ರಭಾವಶಾಲೀ ಮಾಧ್ಯಮವಾದ ಸಿನಿಮಾದ ಹೆಚ್ಚುಗಾರಿಕೆಯೂ ಹೌದು.

ಅವರ 'ಚಿಗುರಿದ ಕನಸು' ಕಾದಂಬರಿ ಸಿನಿಮಾವಾಗಿ ಅದ್ಭುತವಾದ ಯಶಸ್ಸನ್ನು ಗಳಿಸಿದೆ. ಕಾದಂಬರಿಯ ನಾಯಕ 'ಶಂಕರ'ನಿಗೆ ತನ್ನ ಮೂಲನೆಲೆಯ ಹುಡುಕಾಟವನ್ನು ನಡೆಸುತ್ತಾನೆ. ಕಾದಂಬರಿಯ ಶೀರ್ಷಿಕೆಯೇ ಹೇಳಿರುವಂತೆ ವಿದ್ಯಾವಂತನಾದ ಶಂಕರನ ಬಾಳಿನಲ್ಲಿ ತನ್ನ ಪೂರ್ವಜರು ಬಾಳಿ–ಬದುಕಿದ ಹಳ್ಳಿಗೆ ಹೋಗಿ ತನ್ನ ಅಜ್ಜಿಯ ಸೇವೆಯನ್ನು ಮಾಡಿ, ಆಧುನಿಕವಾದ ಮಾದರಿ ರೈತನಾಗಿ ಬದುಕಲು ಇಚ್ಚಿಸುವುದನ್ನು ಚಿಗುರಿದ ಕನಸು ಶೀರ್ಷಿಕೆಯು ಸಮರ್ಥವಾಗಿ ಧ್ವನಿಸುವ ಕೆಲಸವನ್ನು ಮಾಡುತ್ತದೆ.

'ಚಿಗುರಿದ ಕನಸು' ಸಿನಿಮಾ ಹಳೆತಲೆಮಾರು ಮತ್ತು ಹೊಸ ತಲೆಮಾರುಗಳ ಸಂಘರ್ಷಗಳನ್ನು ಸಮರ್ಥವಾಗಿ ತೆರೆಯ ಮೇಲೆ ತರುವ ಪ್ರಯತ್ನ ಮಾಡಲಾಗಿದೆ. ಕಾರಂತರ ಕಾದಂಬರಿಗಳ ಕೇಂದ್ರ ಆಯಾಮಕ್ಕೆ ಎಳ್ಳಷ್ಟು ಧಕ್ಕೆಯಾಗದಂತೆ ಸಮೂಹದೃಷ್ಟಿಯಿಂದ ಚಿಗುರಿದ ಕನಸು ತೆರೆಯ ಮೇಲೆ ಬಂದಿದೆ. ಅಂದರೆ ಕಾದಂಬರಿಕೇಂದ್ರಿತ ಸಿನಿಮಾವನ್ನು ಮಾಡುವ ನಿರ್ದೇಶಕರಿಗೆ ಮತ್ತು ನಿರ್ಮಾಪಕರುಗಳಿಗೆ ಸಾಹಿತ್ಯದ ಅಭಿರುಚಿಯಿರುವುದು ಮುಖ್ಯ. ಕನ್ನಡದಲ್ಲಿ ಸಶಕ್ತವಾದ ಗಟ್ಟಿಕತೆಗಳಲ್ಲಿ ಎನ್ನುವ ನಿರ್ದೇಶಕರಿಗೆ, ನಿರ್ಮಾಪಕರಿಗೆ ಮಾಧ್ಯಮಗಳು ತಮ್ಮ ಸಾಮಾಜಿಕ ಜವಾಬ್ಧಾರಿಯಿಂದ ಕನ್ನಡಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿ ಬರಬೇಕಾದರೆ ಕನ್ನಡ ಸಾಹಿತ್ಯದ ಸತ್ವದಿಂದಲೇ ಬಂದಿರುವುದೆಂದು ತಿಳಿಸುವುದು ಮುಖ್ಯವಾಗಿದೆ.

ಕನ್ನಡ ಪ್ರಮುಖ ಕಥೆಗಾರರು ಅವರ ಕೃತಿಗಳ ಬಗ್ಗೆ ಮಾಧ್ಯಮಗಳು ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಬೇಕು. ಹಿಂದೆ ಆ ಪ್ರಯತ್ನಗಳನ್ನು ಮಾಡಿಲ್ಲ ಎಂದಲ್ಲ. ಇಡೀ ವಿಶ್ವಸಾಹಿತ್ಯ ಮತ್ತು ಸಿನಿಮಾಮಾಧ್ಯಮಗಳಲ್ಲಿ ಕೇವಲ ಒಂದು ಕೃತಿಯನ್ನು ಇಟ್ಟುಕೊಂಡು ಅರ್ಥಪೂರ್ಣವಾದ ಪ್ರಭಾವಶಾಲೀ ಸಿನಿಮಾ ಮಾಡಿದರೆ ಅದು ಕೇವಲ ನಮ್ಮ ಕನ್ನಡ ಸಿನಿಮಾ ಕ್ಷೇತ್ರ.

ಹಿಂದೆ ಡಾ. ಕೆ.ಎಸ್. ನರಸಿಂಹಸ್ವಾಮಿರವರಿಂದ ರಚನೆಗೊಂಡ 'ಮೈಸೂರು ಮಲ್ಲಿಗೆ' ಕವಿತೆಗಳನ್ನು ಇಟ್ಟುಕೊಂಡು ಕನ್ನಡ ದೇಸಿ ಸೊಗಡನ್ನು ಪ್ರತಿಬಿಂಬಿಸುವ, ಕನ್ನಡ ನಾಡಿನ ಸಂಸ್ಕೃತಿ, ಹಿರಿಮೆಗಳನ್ನು ಪ್ರಚಾರಪಡಿಸಿದ ಸಿನಿಮಾವಾಗಿ ಅಪಾರವಾದ ಜನಪ್ರಿಯತೆಯನ್ನು ಪಡೆದಿದೆ.

ಕನ್ನಡ ಕಥನ ಪರಂಪರೆ ತುಂಬಾ ಶಕ್ತಿಯುತವಾದದ್ದು. ಕುವೆಂಪು, ಕಾರಂತ, ಮಾಸ್ತಿ, ಅನಂತಮೂರ್ತಿ, ಆಲನಹಳ್ಳಿ ಕೃಷ್ಣ, ತೇಜಸ್ವಿ, ತ್ರಿವೇಣಿ, ವಾಣಿ, ಎಂ.ಕೆ. ಇಂದಿರಾ, ತರಾಸು, ಅನಕೃ, ದೇವನೂರು ಮಹಾದೇವರವರ ಕೃತಿಗಳು ಸಿನಿಮಾಮಾಧ್ಯಮವಾಗಿ ಹೊರಬಂದಾಗ ಜನಸಾಮಾನ್ಯರಲ್ಲಿ ಅರಿವಿನ ಸ್ಫೋಟವಾಗುವುದು ಖಂಡಿತ.

ಉದಾ: ಸಿನಿಮಾಕ್ಷೇತ್ರ ಎಷ್ಟು ಪ್ರತಿಭಾಶಾಲಿಯೆಂದರೆ ತೇಜಸ್ವಿರವರ ತಬರನ ಕತೆ, ಅಬಚೂರಿನ ಪೋಸ್ಟಾಫೀಸು, ಕಿರುಗೂರಿನ ಗಯ್ಯಾಳಿಗಳು ಸಿನಿಮಾವಾದಾಗ ಅದು ಕೇವಲ ಕನ್ನಡನಾಡಿನ ಕತೆಯಾಗಿ ಮಾತ್ರ ಮೂಡಿರದೇ ಗ್ರಾಮೀಣ ಭಾರತದ ದಾರ್ಶನಿಕತೆಯ ಚಿತ್ರಣವನ್ನು ಕಟ್ಟಿಕೊಡುತ್ತದೆ. ಹಳ್ಳಿಗಳು–ನಗರಗಳಾಗಿ ಮಾರ್ಪಾಡಾಗುತ್ತಿರುವ ಈ ಹೊತ್ತಿನಲ್ಲಿ, ಹಳ್ಳಿ ಮತ್ತು ನಗರಗಳ ಅಂತರವು ಕ್ಷೀಣವಾಗುತ್ತಿರುವ ಈ ಸಂದರ್ಭದಲ್ಲಿ ಕನ್ನಡ ಕಥನಪರಂಪರೆಯನ್ನು ಸಮರ್ಥವಾಗಿ ಸಿನಿಮಾದ ಬೆಳ್ಳಿಪರದೆಯ ಮೇಲೆ ಮೂಡಿಸುವ ಗುರುತರ ಜವಾಬ್ದಾರಿ ಕನ್ನಡ ನಿರ್ದೇಶಕರ ಹೆಗಲ ಮೇಲಿದೆ. ಹಾಗೆಯೇ ನವಮಾಧ್ಯಮಗಳ ಮೂಲಕ ಕನ್ನಡ ಕಥನ ಪರಂಪರೆಯನ್ನು ನವ ಯುವಸಮೂಹಕ್ಕೆ ಆಕರ್ಷಕವಾಗಿ ತಲುಪಿಸುವ ಗುರುತರ ಜವಾಬ್ದಾರಿ, ಸಾಮಾಜಿಕ ಹೊಣೆಗಾರಿಕೆ ಹೊತ್ತಿರುವ ಮಾಧ್ಯಮದ ಮೇಲಿದೆ.

ಹಾಗೆಯೆ ಮಲಯಾಳಂ ಭಾಷೆಯಲ್ಲಿ ತಕಳಿ ಶಿವಶಂಕರ ಪಿಳ್ಳೆರವರದು ಬಹು ದೊಡ್ಡ ಹೆಸರು. ಅವರ ಕಥನಸಾಹಿತ್ಯವು ಕೇರಳದ ನಾಡು, ನುಡಿ, ಸಂಸ್ಕೃತಿಗಳನ್ನು ಸಮರ್ಥವಾಗಿ ಹೊರತರುತ್ತದೆ. ಪ್ರಾರಂಭದಲ್ಲಿ ತಕಳಿರವರು ಸಣ್ಣಕತೆಯ ಮೂಲಕ ಜನಪ್ರಿಯರಾದವರು. ಅವರ ಸಾಹಿತ್ಯ ಬರವಣಿಗೆ ಮಾರ್ಕ್ಸ್‌ವಾದಿ ಹಿನ್ನೆಲೆಯ ನೋಟಕ್ರಮದಿಂದ ಕೂಡಿದೆ, ಹೆಣ್ಣುಗಳ ಚಿತ್ರಣ ಅಶ್ಲೀಲತೆಯಿಂದ ಕೂಡಿರುತ್ತದೆಯೆನ್ನುವ ಚಿಂತನೆಯು ಬರಲು ಪ್ರಾರಂಭವಾದಾಗ ತಕಳಿರವರು ಚೆಮ್ಮೀನ್ (ಕೆಂಪು ಮೀನು) ಕಾದಂಬರಿಯ ಮೂಲಕ ಹೆಣ್ಣಿನ ಧೀಶಕ್ತಿಯನ್ನು ಅನಾವರಣಗೊಳಿಸಿದರು.

ಕೇರಳದ ಸಿನಿಮಾಕ್ಷೇತ್ರದಲ್ಲಿ ಅಂದು–ಇಂದು–ಮುಂದು ಚೆಮ್ಮೀನ್ ಕೇರಳಿಗರ ಮನೆ–ಮನಗಳಲ್ಲಿ ಮಾತಾಗಿದೆ. ತ್ರಿಕೋನ ಪ್ರೇಮಕತೆಯನ್ನು ಒಳಗೊಂಡಿರುವ ಈ ಸಿನಿಮಾ 'ವಧು ದಕ್ಷಿಣೆ'ಯ ಮೌಲ್ಯಗಳ ಬಗ್ಗೆ ಮಾತನಾಡುತ್ತದೆ. ಹೆಣ್ಣಿನಲ್ಲಿರುವ ಅಪಾರವಾದ ಜೀವನಪ್ರೀತಿಯನ್ನು ನಿರ್ದೇಶಕರು ಎಳೆ–ಎಳೆಯಾಗಿ ಹೇಳುವಲ್ಲಿ ಸಫಲರಾಗಿದ್ದಾರೆ.

ದೋಣಿಯನ್ನು ಹೊಂದಿರುವವರು ಮಾತ್ರ ಶ್ರೀಮಂತರೆಂದು ಆ ಸಮಾಜ ನಂಬಿರುವ ವೇಳೆಯಲ್ಲಿ, ನಾಯಕಿಯ ತಂದೆಗೆ ಪ್ರೇಮಿ ಮಾಡಿದ ಸಹಾಯವನ್ನು ತಂದೆ ಮರೆತಾಗ, ಅವನ ಸಾಲವನ್ನು ಹಿಂತಿರುಗಿಸಲು ತಂದೆಯು ಕುಂಟುನೆಪಗಳನ್ನು ಹೇಳಲು ಶುರುಮಾಡಿದಾಗ ಮಗಳು ಉಗ್ರವಾಗುತ್ತಾಳೆ. ಸಿನಿಮಾದ ನಾಯಕಿ ಅಸಹಾಯಕ ಪರಿಸ್ಥಿತಿಗೆ ಒಳಗಾಗಿ ಪ್ರೇಮಿಯನ್ನು ಮರೆತು ತಂದೆ ತೋರಿಸಿದ ಹುಡುಗನನ್ನು ಮದುವೆಯಾಗುತ್ತಾಳೆ. ನಂತರ ದುರಂತಕ್ಕೆ ಕಾರಣವಾಗುತ್ತದೆ.

ಮೀನುಗಾರರ ಸಂಪ್ರದಾಯದಲ್ಲಿ ಹೆಂಡತಿ ಪತಿವ್ರತೆಯಿಂದ ಇದ್ದರೆ ಮಾತ್ರ ಕಡಲಿಗೆ ಹೋದ ಗಂಡ ಸುರಕ್ಷಿತವಾಗಿ ಬರುತ್ತಾನೆ. ಕಡಲನ್ನು ಅವರು 'ಕಡಲಮ್ಮ'ನೆಂದು ಕರೆಯುತ್ತಾರೆ.

'ಚೆಮ್ಮೀನ್' ಸಿನಿಮಾವು ಹೆಣ್ಣಿನ ಅಂತರಂಗವನ್ನು ಸಮರ್ಥವಾಗಿ ಪ್ರತಿನಿಧಿಸುವ ಕಲಾಕೃತಿಯಾಗಿದೆ. 'ಕಡಲು' ಈ ಸಿನಿಮಾದಲ್ಲಿ ರೂಪಕಾತ್ಮವಾಗಿ ಮೂಡಿಬಂದಿದೆ. ಹೆಣ್ಣಿನ ದುಃಖ–ದುಮ್ಮಾನ, ನೋವು–ನಲಿವುಗಳನ್ನು ಸಮರ್ಥವಾಗಿ ನಿಭಾಯಿಸುವ ಶಕ್ತಿಯನ್ನು ಈ ಸಿನಿಮಾ ಹೊಂದಿದೆಯೆನ್ನಲು ಅಡ್ಡಿಯಿಲ್ಲ.

ಒಟ್ಟಾರೆಯಾಗಿ ಕಾರಂತ ಮತ್ತು ತಕಳಿರವರ ಕಾದಂಬರಿಗಳು ಸಿನಿಮಾ ಆದಾಗ ಲೇಖಕರ ಆಶಯಗಳು ಲಿಂಗ, ವರ್ಗ, ವರ್ಣ, ಭಾಷೆಯ ಎಲ್ಲೆಯನ್ನು ಮೀರುವ ಸೃಜನಶೀಲ ಪ್ರಕ್ರಿಯೆಯಾಗುತ್ತದೆ.

ಬದುಕಿನ ಮೌಲ್ಯಗಳನ್ನು ಪುನರ್‌ಸ್ಥಾಪಿಸುವ ಕೆಲಸವು ನಡೆಯುತ್ತದೆ. ಡಿ.ವಿ.ಜಿ.ಯವರು ಹೇಳಿರುವಂತೆ, "ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು"ಯೆನ್ನುವ ಮಾತಿನಂತೆ ಹಿರಿಯ ಲೇಖಕರ ಜೀವನದರ್ಶನಗಳು ಮುಂದಿನ ಪೀಳಿಗೆಗೆ ದೃಶ್ಯ ಮಾಧ್ಯಮಗಳ ಮೂಲಕ ತಲುಪುವುದು ಅತಿಮುಖ್ಯವಾಗಿದೆ.

ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿರುವ ಯುವಸಮೂಹ ತಾಳ್ಮೆ, ಸಹನೆಯನ್ನು, ಆಳದ ಓದನ್ನು ಬಯಸುವ ಕಾದಂಬರಿಗಳನ್ನು ಅಧ್ಯಯನ ಮಾಡುವುದು ಅಸಾಧ್ಯವಾಗುತ್ತಿದೆ. ಈ ಹೊತ್ತಿನಲ್ಲಿ ಇಂದಿನ ನವಮಾಧ್ಯಮಗಳು ದೃಶ್ಯ, ಶ್ರವ್ಯ ಮಾಧ್ಯಮಗಳ ಮೂಲಕ ಲೇಖಕರ ಆಶಯಗಳನ್ನು ತಲುಪಿಸುವ ಕೆಲಸ ಮಾಡುತ್ತಿರುವುದು ಮಾಧ್ಯಮದ ಸಾಮಾಜಿಕ ಹೊಣೆಗಾರಿಕೆ ಎಂತದ್ದು ಎನ್ನುವ ಜನಸಾಮಾನ್ಯರು ಅರಿಯುವ ಪ್ರಯತ್ನ ಮಾಡಬೇಕಾಗಿದೆ.

ಮಾಧ್ಯಮಗಳ ಬಗ್ಗೆ ನಕಾರಾತ್ಮಕ ಅಂಶಗಳು ಎಲ್ಲೆಡೆ ಬೆಳೆಯುತ್ತಿರುವ ಈ ಹೊತ್ತಿನಲ್ಲಿ, ಮಾಧ್ಯಮಗಳು ಋಣಾತ್ಮಕ ಸುದ್ದಿಗಳ ಬಗ್ಗೆ ಮಾತ್ರ ಚರ್ಚಿಸುತ್ತದೆ. ಧನಾತ್ಮಕ ವಿಚಾರಗಳು ಮಾಧ್ಯಮಗಳಿಂದ ಗೌಣವಾಗುತ್ತಿದೆಯೆನ್ನುವ ಅನಿಸಿಕೆಗಳು ಬರುವ ಈ ಹೊತ್ತಿನಲ್ಲಿ ಪ್ರಬುದ್ಧ ಲೇಖಕರ ಕಥನಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವ ಗುರುತರ ಜವಾಬ್ದಾರಿ ಹಿಂದಿಗಿಂತಲೂ ಇಂದು ಮಾಧ್ಯಮಗಳ ಮೇಲೆ ಹೆಚ್ಚಾಗಿದೆಯೆನ್ನಲು ಅಡ್ಡಿಯಿಲ್ಲ.

**ಪರಾಮರ್ಶನ ಗ್ರಂಥಗಳು**


- ಡಾ. ಕೆ. ಶಿವರಾಮ ಕಾರಂತ, ಚೋಮನ ದುಡಿ, ಸಪ್ನ ಬುಕ್ ಹೌಸ್, ಬೆಂಗಳೂರು.
- ಡಾ. ಕೆ. ಶಿವರಾಮ ಕಾರಂತ, ಬೆಟ್ಟದ ಜೀವ, ಸಪ್ನ ಬುಕ್ ಹೌಸ್, ಬೆಂಗಳೂರು.
- ತಕಳಿ ಶಿವಶಂಕರ್ ಪಿಳ್ಳೈ, ಚೆಮ್ಮೀನ್, ನಾ. ಕಸ್ತೂರಿ (ಅನು), ನ್ಯಾಷನಲ್ ಬುಕ್ ಟ್ರಸ್ಟ್, ಬೆಂಗಳೂರು.
- ಡಾ. ಕೆ. ಶಿವರಾಮ ಕಾರಂತ, ಸರಸಮ್ಮನ ಸಮಾಧಿ, ಸಪ್ನ ಬುಕ್ ಹೌಸ್, ಬೆಂಗಳೂರು.
- ಡಾ. ಕೆ. ಶಿವರಾಮ ಕಾರಂತ, ಚಿಗುರಿದ ಕನಸು, ಸಪ್ನ ಬುಕ್ ಹೌಸ್, ಬೆಂಗಳೂರು.
- ಕೆ.ಎಸ್. ನರಸಿಂಹಸ್ವಾಮಿ, ಮೈಸೂರು ಮಲ್ಲಿಗೆ (ಕಾವ್ಯ), ಸಪ್ನ ಬುಕ್ ಹೌಸ್, ಬೆಂಗಳೂರು.